**ಪತ್ರಿಕಾ ಪ್ರಕಟಣೆ**

ವಿಜಯಪುರ
ದಿನಾಂಕ: 26.05.2021.

**1] ಕಲಕೇರಿ ಪೊಲೀಸ ಠಾಣೆ ಗುನ್ನಾ. ನಂ: 64/2021 ಕಲಂ: 279, 304(ಎ), 337, 283 ಐ.ಪಿ.ಸಿ.**

ದಿನಾಂಕ: 25.05.2021 ರಂದು 19:30 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ 1] ಮೃತ ಮಲಕಪ್ಪ ಮಹಾದೇವಪ್ಪ ಹಿಕ್ಕನಗುತ್ತಿ ಸಾ॥ ಹಂದಿಗನೂರ ಹೊಂಡಾ ಶೈನ ಮೋಟರ ಸೈಕಲ್ ನಂ-ಕೆಎ- 28ಇಝಿ-0269 ನೇದ್ದರ ಚಾಲಕ **2**] ನಿಂಗಣ್ಣ ತಂದೆ ಈರಪ್ಪ ಪತ್ತಾರ ಸಾ॥ ಹಂದಿಗನೂರ ಈಚ್ಚರ ಕಂಪನಿಯ ಟ್ರ್ಯಾಕ್ಟರ ಇಂಜಿನ ನಂ- ಕೆಎ-28/ಟಿಎ-3202 ಮತ್ತು ಟ್ರೇಲರ ನಂ-ಕೆಎ-28/ಟಿಎ-3203 ನೇದ್ದರ ಚಾಲಕ ಇವರು ಸಿಂದಗಿ ಕಲಕೇರಿ ಡಾಂಬರ ರಸ್ತೆಯ ಮೇಲೆ ಹಡಗಿನಾಳ ಕ್ರಾಸ ದಾಟಿ 200 ಮೀಟರ ಅಂತರದಲ್ಲಿ ಕಲಕೇರಿ ಕಡೆಗೆ ಫಿರ್ಯಾದಿ ಗಂಡನಾದ ಮೃತ ಮಲಕಪ್ಪ ಹಿಕ್ಕಣಗುತ್ತಿ ಇತನು ತನ್ನ ಮೋಟರ ಸೈಕಲ ಅತಿ ವೇಗವಾಗಿ ನಿರ್ಲಕ್ಷತೆಯಿಂದ ನಡೆಯಿಸಿಕೊಂಡು ಬಂದಿದ್ದು, ಆರೋಪಿ ನಿಂಗಣ್ಣ ತಂದೆ ಈರಪ್ಪ ಪತ್ತಾರ ಸಾ॥ ಹಂದಿಗನೂರ ಇತನು ಈಚ್ಚರ ಕಂಪನಿಯ ಟ್ರ್ಯಾಕ್ಟರ ಇಂಜಿನ ನಂ-ಕೆಎ-28 ಟಿಎ-3202 ಮತ್ತು ಟ್ರೇಲರ ನಂ-ಕೆಎ-28 ಟಿಎ-3203 ನೇದ್ದು ಡಾಂಬರ ರಸ್ತೆಯ ಮೇಲೆ ಯಾವುದೆ ಮುಂಜಾಗೃತ ಕ್ರಮ ಕೈಗೊಳ್ಳದೆ ಹೀಗೆ ರಸ್ತೆಯ ಮೇಲೆ ಟ್ರ್ಯಾಕ್ಟರ ನಿಲ್ಲಿಸಿದರೆ ಹಿಂದೆ ಬರುವ ವಾಹನಗಳು ಅಪಘಾತಾಗುವ ಸಂಭವ ಇರುತ್ತವೆ ಅಂತ ಗೊತ್ತಿದ್ದು, ಮತ್ತು ಹಿಂದೆ ಬರುವ ವಾಹನಗಳಿಗೆ ಯಾವುದೆ ಸೂಚನೆ ನೀಡದೆ ರಸ್ತೆಯ ಮೇಲೆ ವಾಹನ ನಿಲ್ಲಿಸಿದ್ದು, ಫಿರ್ಯಾದಿ ಗಂಡ ಮೃತ ಮಲಕಪ್ಪ ವೇಗವಾಗಿ ಮೋಟರ ಸೈಕಲ್ ನಡೆಯಿಸಿಕೊಂಡು ಬಂದು ರಸ್ತೆ ಮದ್ಯ ನಿಲ್ಲಿಸಿದ ಟ್ರ್ಯಾಕ್ಟರ ಟ್ರೇಲರಿಗೆ ಹಾಯಿಸಿ ಅಪಘಾತ ಪಡಿಸಿದ್ದು, ಫಿರ್ಯಾದಿ ಗಂಡನಿಗೆ ತಲೆಗೆ ಟ್ರ್ಯಾಕ್ಟರ ಟ್ರೇಲರ ಬಡಿದು ತಲೆ ಒಡೆದು ರಕ್ತ ಸೋರಿದ್ದು, ಮತ್ತು ಮೋಟರ ಸೈಕಲ ಹಿಂದೆ ಕುಳಿತಿದ್ದ ಸಾಕ್ಷಿದಾರ ಭೀಮಪ್ಪನಿಗೆ ಸೊಂಟಕ್ಕೆ ಹಾಗೂ ಬಲ ಮೊಳಕಾಲಿಗೆ ಸಾದಾ ಗಾಯ ಪೆಟ್ಟು ಆಗಿದ್ದು, ಇಬ್ಬರಿಗೂ ಉಪಚಾರಕ್ಕಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ, ಪೀರ್ಯಾದಿ ಗಂಡ ಮಲಕಪ್ಪ ಇತನು ಸಿಂದಗಿ ಬೈಪಾಸ ಹತ್ತಿರ ರಾತ್ರಿ 08:30 ಗಂಟೆ ಸುಮಾರಿಗೆ ಮರಣ ಹೊಂದಿರುತ್ತಾನೆ ಅಂತ ಫಿರ್ಯಾದಿಯಲ್ಲಿ ನಮೂದು ಅದೆ. ಈ ಬಗ್ಗೆ ರೂಪಾ ಗಂಡ ಮಲಕಪ್ಪ ಹಿಕ್ಕಣಗುತ್ತಿ ವಯಾ-24 ವರ್ಷ ಜಾತಿ-ಹಿಂದು ಕುರಬರ ಉದ್ಯೋಗ-ಕೂಲಿ ಕೇಲಸ ಸಾ॥ಚಾಂದಕವಟೆ ಹಾ.ವ ಹಂದಿಗನೂರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 25.05.2021 ರಂದು ಕಲಕೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಗೋಲಗುಮ್ಮಜ ಪೊಲಿಸ್ ಠಾಣೆ ಗುನ್ನಾ. ನಂ: 56/2021 ಕಲಂ: 188, 269 ಐಪಿಸಿ**

ದಿನಾಂಕ: 25.05.2021 ರಂದು 18.40 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ 1] ಗೌಸಪಾಕ ಹುಸೇನಸಾಬ ರಾಜನಾಳ, ಸಾ: ಸುಭಾಷ ಕಾಲನಿ, ಬೆಂಡಿಗೇರಿ ಗಲ್ಲಿ, ವಿಜಯಪುರ ಈತನು ಸದ್ಯಕ್ಕೆ ಮಾನ್ಯ ಕರ್ನಾಟಕ ಸರಕಾರವು ಕರೋನಾ ವೈರಸ್/ಕೋವಿಡ್-19 ಅಪಾಯಕಾರಿ ಸಾಂಕ್ರಾಮಿಕ ರೋಗ ಹರಡದಂತೆ ಸೂಕ್ತ ಮುಂಜಾಗ್ರತಾ ಕ್ರಮವಾಗಿ ತುರ್ತು ಅಗತ್ಯ ವಸ್ತುಗಳನ್ನು ಪಡೆದುಕೊಳ್ಳಲು ನಿಗಧಿತ ಸಮಯವನ್ನು ಹೊರತುಪಡಿಸಿ ಇನ್ನೂಳಿದಂತೆ ಸಮಯ ಮೀರಿ ಅನಾವಶ್ಯಕವಾಗಿ ಹೊರಗಡೆ ಅಡ್ಡಾಡುವುದನ್ನು ನಿಷೇಧಿಸಿ ಆದೇಶವನ್ನು ಹೊರಡಿಸಿದ್ದನ್ನು ಸಕ್ರಿಯವಾಗಿ ಜಾರಿಗೊಳಿಸುವ ದೃಷ್ಠಿಯಿಂದ ಪಿರ್ಯಾದುದಾರರು ಹಾಗೂ ಸಿಬ್ಬಂದಿಗಳು ಕೂಡಿಕೊಂಡು ವಿಜಯಪುರದ ಜೆ.ಎಂ.ರಸ್ತೆಯ ಹಕೀಂ ಚೌಕ ಹತ್ತಿರ ಪೆಟ್ರೋಲಿಂಗ ಮಾಡುತ್ತಿದ್ದಾಗ ಅಲ್ಲಿ ಒಬ್ಬ ವ್ಯಕ್ತಿ ತಿರುಗಾಡುತ್ತಿದ್ದು, ಅವನನ್ನು ವಿಚಾರಿಸಲಾಗಿ ಯಾವುದೇ ಸಮರ್ಪಕ ಕಾರಣ ನೀಡದೇ ಹಾಗೆ ಸುಮ್ಮನೆ ತಿರುಗಾಡುತ್ತಿದ್ದೆನೆ ಅಂತಾ ಹೇಳಿದ್ದು, ಸದರಿಯವನು ಅನಾವಶ್ಯಕವಾಗಿ ಹೊರಗಡೆ ಬಂದು ತಿರುಗಾಡಿ ಕರೋನಾ ವೈರಸ್/ಕೋವಿಡ್-19 ವೈರಸ್ ಹರಡದಂತೆ ಮಾನ್ಯ ಕರ್ನಾಟಕ ಸರಕಾರವು ಹೊರಡಿಸಿದ ಆದೇಶವನ್ನು ಉಲ್ಲಂಘನೆ ಮಾಡಿದ್ದಲ್ಲದೇ, ಸದರಿ ಕೊರೋನಾ ವೈರಸ್ ಎಂಬ ಮಾರಕ ಕಾಯಿಲೆ ಒಬ್ಬರಿಂದ ಮತ್ತೊಬ್ಬರಿಗೆ ಹರಡುತ್ತದೆ ಅಂತಾ ತಿಳಿದು-ತಿಳಿದು ನಿರ್ಲಕ್ಷತನ ಪ್ರದರ್ಶಿಸಿದ ಅಪರಾಧ.

**3] ಗಾಂಧಿಚೌಕ ಪೊಲೀಸ್ ಠಾಣೆ ಗುನ್ನಾ. ನಂ: 103/2021 ಕಲಂ: 188,269 ಐಪಿಸಿ, ಹಾಗೂ ಕಲಂ 51(ಬಿ) ಡಿ ಎಮ್ ಕಾಯ್ದೆ 2005**

ದಿನಾಂಕ: 25.05.2021 ರಂದು 11.00 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ 1] ರಮೇಶ ಚುನಿಲಾಲ್ ಜೈನ್ ಸಾ; ರಾಮಂದಿರ ರಸ್ತೆ ವಿಜಯಪುರ ಈತನು ಸದ್ಯಕ್ಕೆ ಕೊರೊನಾ ವೈರಸ್ ಕೋವಿಡ್-19 ಅಪಾಯಕಾರಿ ಸಾಂಕ್ರಾಮಿಕ ರೋಗ ಹರಡದಂತೆ ಸೂಕ್ತ ಮುಂಜಾಗ್ರತೆ ಕ್ರಮವಾಗಿ ಮಾನ್ಯ ಕರ್ನಾಟಕ ಸರಕಾರವು ಕೊರೊನಾ ವೈರಸ್ /ಕೋವಿಡ್-19 ಪ್ರಕರಣಗಳನ್ನು ಸಾಂಕ್ರಾಮಿಕವಾಗಿ ಹರಡದಂತೆ ತಡೆಗಟ್ಟುವ ಮತ್ತು ಅಪಾಯಕಾರಿ ಸಾಂಕ್ರಾಮಿಕ ರೋಗವನ್ನು ತಡೆಗಟ್ಟುವ ನಿಟ್ಟಿನಲ್ಲಿ ಮತ್ತು ಸಾರ್ವಜನಿಕರ ಹಿತದೃಷ್ಠಿಯನ್ನು ಕಾಯ್ದುಕೊಳ್ಳಲು ಮುಂಜಾಗ್ರತ ಕ್ರಮವಾಗಿ ಸಾರ್ವಜನಿಕ ಸಭೆ ಸಮಾರಂಭ, ಮದುವೆ, ಚಲನಚಿತ್ರ ಪ್ರದರ್ಶನ, ವಸ್ತು ಪ್ರದರ್ಶನ ಇತ್ಯಾದಿ ಸಾರ್ವಜನಿಕರು ಹೆಚ್ಚಾಗಿ ಸೇರುವ ಎಲ್ಲ ಚಟುವಟಿಕೆಗಳನ್ನು ನಿಷೇದಿಸಿ ಕರ್ನಾಟಕ ಸರ್ಕಾರ ಆದೇಶ ಹೊರಡಿಸಿದ್ದು ಇರುತ್ತದೆ ಕರ್ನಾಟಕ ಸರ್ಕಾರದ ಆದೇಶದಂತೆ ಅಗತ್ಯ ವಸ್ತುಗಳ ಮಾರಾಟಕ್ಕೆ ಮಾತ್ರ ಅವಕಾಶ ನೀಡಿದ್ದು ಆರೋಪಿತನು ವಿಜಯಪುರ ಕನ್ನಡ ಗಂಡು ಮಕ್ಕಳ ಶಾಲೆ ನಂ 1 ಕಂಪೌಂಡಗೆ ಹೊಂದಿಕೊಂಡಿರುವ ಕಾಂಪ್ಲೆಕ್ಷದಲ್ಲಿನ ತನ್ನ ಬ್ಯಾಗಿನ ಅಂಗಡಿ ತರೆದು ವ್ಯಾಪಾರ ಮಾಡಬಾರದು ಅಂತಾ ಗೊತ್ತಿದ್ದರು ಸಹ ತಿಳಿದು ತಿಳಿದೂ ತನ್ನ ಬ್ಯಾಗಿನ ಅಂಗಡಿ ತರೆದು ಸಾರ್ವಜನಿಕರಿಗೆ ಬ್ಯಾಗಗಳನ್ನು ಮಾರಾಟ ಮಾಡಿ ಮಾನ್ಯ ಕರ್ನಾಟಕ ಸರಕಾರದ ಆದೇಶವನ್ನು ಪಾಲನೆ ಮಾಡದೆ ಅಪಾಯಕಾರಿ ಸಾಂಕ್ರಾಮಿಕ ರೋಗ ಹರಡುವಿಕೆಯ ಬಗ್ಗೆ ನಿರ್ಲಕ್ಷವಹಿಸಿ ಕರ್ನಾಟಕ ಸರ್ಕಾರದ ಆದೇಶ ಉಲ್ಲಂಘನೆ ಮಾಡಿದ ಅಪರಾಧ. ಈ ಬಗ್ಗೆ ಸ:ತ: ಆರ್ ಬಿ ಕೊಡಗಿ ಪಿ ಎಸ್ ಐ(ಅವಿ) ಗಾಂದಿಚೌಕ ಪಿಎಸ್ ವಿಜಯಪುರ ರವರು ಫಿರ್ಯಾದಿ ಕೊಟ್ಟ ಮೇರೆಗೆ, ದಿನಾಂಕ: 25.05.2021 ರಂದು ಗಾಂಧಿಚೌಕ ಪೊಲೀಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.